

ಘಟನೆಗಳು ನಡೆಯಬಾರದು ಎಂಬ ಕಾರಣಕ್ಕೆ ಕವಿತಾ ರಚನೆಗೆ ಸಂಬಂಧಿಸಿದಂತೆ ಕೆಲವು ಕಾನೂನು ಕಾಯ್ದೆಗಳನ್ನು ನಾವು ವಿಧಿಸಿದ್ದೇವೆ. ಅವುಗಳನ್ನು ಎಲ್ಲಾ ಕವಿಗಳು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ. ಸುವರ್ಣ ದೇಶದ ಸುರಕ್ಷತೆ ಮತ್ತು ಗೌರವದ ದೃಷ್ಟಿಯಿಂದ ಇನ್ನು ಮುಂದೆ ಕವಿತೆ ರಚನೆಗಾಗಿ ವಿಷಯಗಳನ್ನು ನಿಶ್ಚಿತಗೊಳಿಸುತ್ತಿದ್ದೇವೆ. ಅಂತಹ ವಿಷಯಗಳನ್ನು ಬಿಟ್ಟು ಕವಿತೆ ರಚಿಸುವವರನ್ನು 'ಕವಿಗಳು' ಎಂದು ಮಾನ್ಯ ಮಾಡಲಾಗುವುದಿಲ್ಲ ಮತ್ತು ಅವರಿಗೆ ಒದಗಬಹುದಾದ ಸಂಕಷ್ಟಗಳಿಗೆ ಅವರೇ ಕಾರಣರಾಗುತ್ತಾರೆಯೇ ಹೊರತು ದೇಶ ಹೊಣೆಯಾಗುವುದಿಲ್ಲ.

ರಾಜನ ಘೋಷಣೆಯ ಬಳಿಕ ಗುಪ್ತಮಂತ್ರಿ ಯಾವ ಯಾವ ವಿಷಯಗಳ ಕುರಿತು ಕವಿತೆ ರಚಿಸಬಹುದು, ಯಾವುದರ ಬಗ್ಗೆ ಬರೆಯಬಾರದು ಎಂಬುದನ್ನು ಸವಿಸ್ತಾರವಾಗಿ ತಿಳಿಸುತ್ತಾ ನಮ್ಮ ಕವಿಗಳು ದೇಶದ ಒಳಿತಿಗಾಗಿ ತಮ್ಮ ಸಂತುಲತೆಯನ್ನು ಕಳೆದುಕೊಳ್ಳದೆ ಜವಾಬ್ದಾರಿಯಿಂದ ವರ್ತಿಸಬೇಕು. ರಾಜರ ಗೌರವ, ದೇಶದ ಸುರಕ್ಷತೆ, ಧಾರ್ಮಿಕ ನಾಯಕರ ಬಗ್ಗೆ ಶ್ರದ್ಧೆ, ಗೌರವ, ನಮ್ಮ ಸೈನಿಕರ ಬಗ್ಗೆ ಅಭಿಮಾನವನ್ನು ಹೊರಹೊಮ್ಮಿಸುವ ಕವಿತೆಗಳನ್ನ? ರಚಿಸಬೇಕು. ಇದರಿಂದಾಗಿ ಸಮಸ್ತ ಪ್ರಪಂಚ ನಮ್ಮ ದೇಶವನ್ನು ಗಮನಿಸುವಂತಾಗಬೇಕು. ನಮ್ಮಲ್ಲಿ ವೇದನೆಯ ನದಿ ಹಾಗೂ ದುಃಖದ ಪರ್ವತಗಳ ಹೊರತಾಗಿಯೂ ಅಸಂಖ್ಯ ನದಿ ಪರ್ವತಗಳು ಇವೆ. ಅವುಗಳ ಕುರಿತು ಕಾವ್ಯ, ಕವಿತೆ ರಚಿಸಬಹುದು…' ಎಂದು ವಿವರಿಸಿದ.

ಗುಪ್ತಮಂತ್ರಿ ಮುಂದುವರೆದು ಹೇಳಿದ… ಹಾಂ., ಮುಂದೆ ಸಾಧ್ಯವಾದರೆ ನೋವಿನ ನದಿಗಳ ಬಗ್ಗೆ, ದುಃಖದ ಪರ್ವತಗಳ ಬಗ್ಗೆಯೂ ಕೆಲವು ಕವಿತೆಗಳನ್ನು ಬರೆಯಲು ಅವಕಾಶ ನೀಡಲಾಗುವುದು. ಆದರೆ ದೇಶದ ಮಾನ, ಗೌರವ, ಶಾಂತಿ, ಸುವ್ಯವಸ್ಥೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕವಿತೆಗಳನ್ನು ಆಯ್ಕೆಮಾಡಿ ಪ್ರಕಟಿಸಲು ಐದು ಜನರ ಒಂದು 'ಸಂಪಾದಕ ಮಂಡಳಿ'ಯನ್ನು ರೂಪಿಸಲಾಗುವುದು. ಅವರ ನಿರ್ಣಯವೇ ಅಂತಿಮವಾಗಿರುತ್ತದೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಕವಿಗಳ ನಿರಂಕುಶತೆ ಮುಖ್ಯವೋ ಅಥವಾ ಸುವರ್ಣದೇಶದ ಸುಖ, ಶಾಂತಿ ಮುಖ್ಯವೋ ಎಂದು ಜನರನ್ನು ಕೇಳಿದಾಗ ಮುಗ್ಧ ಜನರು 'ದೇಶವೇ ಮುಖ್ಯ' ಎಂದು ಚಪ್ಪಾಳೆ ತಟ್ಟಿದರು. ಈ ನಿರ್ದೇಶನಗಳ ನಂತರ ಹಗಲು ರಾತ್ರಿ ಎಚ್ಚರವಿದ್ದು ದುಃಖದ ಪರ್ವತಗಳು ಹಾಗೂ ನೋವಿನ ನದಿಗಳ ಬಗ್ಗೆ ಕವಿತೆ ಬರೆಯುತ್ತಿದ್ದ ಕವಿಗಳು ಸ್ತಬ್ಧರಾಗಿಬಿಟ್ಟರು.

ಈಗ ಹೊಸ ಹೊಸ ಕವಿಗಳು ಆವಿರ್ಭವಿಸಿದರು. ವಿಭಿನ್ನ ಪ್ರಕಾರದ ವಿವಿಧ ವಿಷಯಗಳನ್ನೊಳಗೊಂಡ ಅಸಂಖ್ಯ ಕವಿತೆಗಳು ಪ್ರಕಟವಾಗತೊಡಗಿದವು. ಗುಪ್ತಮಂತ್ರಿ ಅಂತಹ ಕವಿಗಳಿಗೆ ರಾಜಕೀಯ ಸನ್ಮಾನ ನೀಡಿ ಗೌರವಿಸಿ ಹೇಳಿದ, ನೋಡಿ, ನಿಜವಾದ ಕವಿಗಳು ಯಾವುದೇ ವಿಷಯಗಳ ಬಗ್ಗೆ ಕವಿತೆ ರಚಿಸಬಲ್ಲರು… ಎಂಬುದಕ್ಕೆ ಈ ಹೊಸ ಪೀಳಿಗೆಯ ಕವಿಗಳೇ ಉದಾಹರಣೆ. ಈ ಬದಲಾವಣೆಗೆ ನಮ್ಮ ರಾಜರ ಅಗಾಧ ಜ್ಞಾನವೇ ಕಾರಣ. ಅವರು ಅಸಲಿ ಮತ್ತು ನಕಲಿ ಕವಿಗಳನ್ನು ಸ್ಪಷ್ಟವಾಗಿ ವಿಭಜಿಸಲು ಕಾರಣಕರ್ತರಾಗಿದ್ದಾರೆ'.

ಹಾಗೆಂದು ನೋವಿನ ನದಿಗಳ ಬಗ್ಗೆ, ದುಃಖದ ಪರ್ವತಗಳ ಕುರಿತು ಕವಿತೆ ಬರೆಯುತ್ತಿದ್ದ ಕವಿಗಳು ಈಗ ಸುಮ್ಮನೆ ಕುಳಿತಿದ್ದರು ಎಂದರ್ಥವಲ್ಲ. ಒಳ ಬೇಗುದಿಯನ್ನು ವ್ಯಕ್ತಪಡಿಸಲು ಅವರು ನೋವಿನ, ದುಃಖದ ಕವಿತೆಗಳನ್ನು ರಚಿಸುತ್ತಿದ್ದರು. ಸೈನಿಕರು ಬಂದ ತಕ್ಷಣ ಅವುಗಳನ್ನು ಹರಿದು ಗಾಳಿಯಲ್ಲಿ ತೇಲಿ ಬಿಡುತ್ತಿದ್ದರು. ಸೈನಿಕರು ಅವುಗಳನ್ನು ಹಿಡಿದು ಒಗ್ಗೂಡಿಸಲು ಒದ್ದಾಡಿ ಕೊನೆಗೆ ಸುಸ್ತಾಗಿ ತಮ್ಮ ಬಂದು ಅಭ್ಯಾಸದ ಕಡೆಗೆ ಹೊರಳುತ್ತಿದ್ದರು. ಅವರ ಮುಖ್ಯ ವೃತ್ತಿಯಾದರೂ ಅದೇ ತಾನೆ…!

ಸುವರ್ಣದೇಶದ ಕವಿಗಳು ಬಹಳ ಚಾಲಾಕಿಗಳೇ ಆಗಿದ್ದರು. ಅವರು ಮೊದಲಿಗೆ ಹಾಗೆಯೇ ಕವಿತೆಗಳನ್ನು ರಚಿಸಲು ಪ್ರಾರಂಭಿಸಿದರು. ಆದರೆ ಕವಿತೆಯ ಕೆಳಗೆ 'ಇದು ಪಕ್ಕದ ಶತ್ರು ದೇಶದ ರಾಜನನ್ನು ಕುರಿತಾದದ್ದು. ಆ ದೇಶದ ಜನತೆ ರಾಜನ ಅನ್ಯಾಯ–ಅತ್ಯಾಚಾರದಿಂದ ಒದ್ದಾಡುತ್ತಿದ್ದಾರೆ. ಅವರಿಗೆ ಸುವರ್ಣ ದೇಶದಂತಹ ರಾಜ ಸಿಗಬೇಕು. ಆಗ ಅವರು ನೆಮ್ಮದಿಯ ಜೀವನ ಸಾಗಿಸಬಹುದು' ಎಂದು ಅಡಿ ಟಿಪ್ಪಣಿ ಬರೆಯಲಾರಂಭಿಸಿದರು. ಇವರ ಕೆಲವು ಕವಿತಾ ಸಂಕಲನಗಳು ಕೂಡ ಪ್ರಕಟವಾದವು. ಆದರೆ ಸ್ವಲ್ಪ ದಿನ ಕಳೆಯುವುದರಲ್ಲಿ ಕವಿಗಳ ಈ ತಂತ್ರ ಗುಪ್ತಮಂತ್ರಿಯ ಮೂಲಕ ರಾಜನಿಗೆ ತಿಳಿದುಹೋಯಿತು.

ರಾಜನ ಅಧಿಕಾರದ ವಾರ್ಷಿಕೋತ್ಸವದ ದಿನದಂದು ಕೆಲವು ಕವಿಗಳು ರಾಜನ ಸಮ್ಮುಖದಲ್ಲಿ ಕವಿತಾ ವಾಚನ ಮಾಡಲು ಪ್ರಾರಂಭಿಸಿದರು. ರಾಜ ಇದ್ದಕ್ಕಿದ್ದ ಹಾಗೆ ಕೋಪಗೊಂಡು ಎಲ್ಲಾ ಕವಿಗಳನ್ನು ಬಂಧಿಸುವಂತೆ ಆದೇಶ ನೀಡಿದ. ಜೊತೆಗೆ 'ಕವಿಗಳಿಗೆ ಕವಿತೆಗಳನ್ನು ಬರೆಯುವ ಹಕ್ಕು ಇದೆ. ಆದರೆ ಅದಕ್ಕೆ ಆಡಳಿತದಿಂದ ವಿಶೇಷ ಅನುಮತಿ ಪಡೆಯಬೇಕು. ಪ್ರಕಟಣೆಗೆ ಮೊದಲು ಆಯ್ಕೆ ಸಮಿತಿಯ ಒಪ್ಪಿಗೆ ಪಡೆಯಬೇಕು' ಎಂದು ಆಜ್ಞಾಪಿಸಿದ.

ಕವಿಗಳು ಇದಕ್ಕೂ ಬಗ್ಗದೆ ತಮ್ಮದೇ ರೀತಿಯಲ್ಲಿ ಕಾವ್ಯ, ಶಿಲ್ಪ, ಅಂತ್ಯ, ಪ್ರಾಸ ರಹಿತವಾದ ಗದ್ಯ–ಪದ್ಯ ಮಿಶ್ರಿತ ಕವಿತೆಗಳನ್ನು ಬರೆದು ವಿಚಿತ್ರ ಶೀರ್ಷಿಕೆಗಳನ್ನು ನೀಡಲಾರಂಬಿಸಿದರು. ರಾಜ ಈಗ ಅಂತಿಮವಾಗಿ ಸೈನಿಕರ ಮೂಲಕ ಎಲ್ಲಾ ಕವಿಗಳ ಲೇಖನಿ, ಕಾಗದ ಮುಂತಾದವುಗಳನ್ನು ಜಪ್ತು ಮಾಡಿಸಿ ಅವುಗಳನ್ನು ರಾಜ ಆಜ್ಞಾನುಸಾರ ಕವಿತೆ ಬರೆಯುತ್ತಿದ್ದ ಹೊಸ ಪೀಳಿಗೆಗೆ ವಿತರಿಸಿದ.

ಕವಿಗಳ ಲೇಖನಿಗಳು ಸ್ತಬ್ಧವಾದವು. ಕವಿಗಳು ಅಸ್ಪಷ್ಟ ಸ್ವರಗಳಿಂದ ಬಡಬಡಿಸಲಾರಂಭಿಸಿದರು. ಕಾವ್ಯಪ್ರೇಮಿ ಪ್ರಜೆಗಳು ದುಃಖದ ಪರ್ವತಗಳ ಬಗ್ಗೆ, ನೋವಿನ ನದಿಗಳ ಬಗ್ಗೆ ಕವಿತೆ ಬರೆಯದೆ ಮತ್ತ್ಯಾವುದರ ಬಗ್ಗೆ ಕವಿತೆ ರಚಿಸಬೇಕು? ಕವಿಗಳ ತಳಮಳ ರಾಜನಿಗೆ ಏಕೆ ಅರ್ಥವಾಗುವುದಿಲ್ಲ…? ಎಂದು ಯೋಚಿಸಿ ವಿಹ್ವಲರಾದರು.

ಪ್ರಜೆಗಳು ತಮ್ಮ ಇಷ್ಟದ ಕವಿತೆಗಳ ರಚನೆ ಮತ್ತು ಪ್ರಕಟಣೆಗೆ ಒತ್ತಾಯಿಸಿ ಬೀದಿಗಿಳಿದು ಪ್ರತಿಭಟಿಸಲಾರಂಭಿಸಿದರು. ಆಗ ಕವಿತೆಗಳ ವಸ್ತುಗಳು ಪರ್ವತಗಳಿಂದ ಉದುರುತ್ತಾ ನದಿಯಲ್ಲಿ ತೇಲುತ್ತಾ ಗಾಳಿಯಲ್ಲಿ ಹಾರಾಡುತ್ತಾ ಇಡೀ ದೇಶವನ್ನು ಆಕ್ರಮಿಸಿದವು. ಇದರಿಂದ ವ್ಯಗ್ರನಾದ ರಾಜ ಪರಿಸ್ಥಿತಿಯ ನಿಯಂತ್ರಿಸಲು ಕೊನೆಯ ಪ್ರಯತ್ನದ ಸಲುವಾಗಿ ಬೀಸುವುದನ್ನು ನಿಲ್ಲಿಸುವಂತೆ ಗಾಳಿಗೆ ಆದೇಶ ನೀಡಿದ. ಕೂಡಲೇ ಗಾಳಿ ರಾಜನಿಗೆ ಯಥೇಚ್ಛ ಕವಿತೆಗಳನ್ನು ತಿಳಿಸಿತು. ಮಳೆಗೆ ನೀರು ಸುರಿಸುವುದನ್ನು ನಿಲ್ಲಿಸಲು ರಾಜ ಆಜ್ಞಾಪಿಸಿದ. ತಡ ಮಾಡದೆ ಮಳೆ ಆರ್ಭಟಿಸುತ್ತಾ ಸುರಿದು ಕವಿತೆಗಳ ಭಾರೀ ಪ್ರವಾಹವನ್ನೇ ಉಂಟುಮಾಡಿತು. ಆ ಪ್ರವಾಹದಲ್ಲಿ ರಾಜ ಕೊಚ್ಚಿಹೋದ.

ಕವಿತೆಗಳ ಹೊಡೆತದಿಂದ ದುಃಖದ ಪರ್ವತಗಳು ಕುಬ್ಜವಾಗಿ ಹೋದವು. ನೋವಿನ ನದಿಗಳ ನೀರು ಸ್ಫಟಿಕದಂತೆ ಮಿನುಗಲಾರಂಭಿಸಿತು. ನೀರಿನ ಪಾರದರ್ಶಕತೆಯಿಂದ ನದಿಯ ತಳದಲ್ಲಿ ಹುದುಗಿದ್ದ ನೋವು–ವ್ಯಥೆಗಳು ಸ್ಪಷ್ಟವಾಗಿ ಗೋಚರಿಸಲಾರಂಭಿಸಿದವು.

ಪ್ರತಿಕ್ರಿಯಿಸಿ: feedback@sudha.co.in